

# ದಿವ್ಯತ್ರಯ ದರ್ಶನಧಾರೆ

**ಡಾ.ಸಿ.ಪಿ.ಕೆ.**

ಶ್ರೀರಾಮಕೃಷ್ಣ, ಶ್ರೀಶಾರದಾದೇವಿ, ಸ್ವಾಮಿ ವಿವೇಕಾನಂದರು ಮನುಕುಲಕ್ಕೆ ನೀಡಿದ ಸಂದೇಶಗಳಲ್ಲಿ ಹೊಸತನವಿದೆ, ದಾರ್ಶನಿಕತೆಯಿದೆ, ಅನುಭಾವದ ಮಡುವಿನಿಂದ ಮಿಂದೆದ್ದ ಪ್ರಾಮಾಣ್ಯವಿದೆ. ಈ ವಿಷಯವಾಗಿ ಲೇಖಕರು ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಮಕೃಷ್ಣ ಭಾವ ಪ್ರಚಾರ ಪರಿಷತ್ತಿನ ೯ನೇ ವಾರ್ಷಿಕೋತ್ಸವದ ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಉಪನ್ಯಾಸದ ಲೇಖನರೂಪವಿದು. ಲೇಖಕರು ಕನ್ನಡದ ಸುಪ್ರಸಿದ್ಧ ಬರಹಗಾರರು. ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳನ್ನು ರಚಿಸಿ ಪ್ರಕಟಿಸಿರುವ ಅವರು ಮೈಸೂರು ಆಶ್ರಮದ ಭಕ್ತರೂ ಆಗಿದ್ದಾರೆ.

**ಯಸ್ಯ ವೀರ್ಯೇಣ ಕೃತಿನೋ ವಯಂ ಚ ಭುವನಾನಿ ಚ**
**ರಾಮಕೃಷ್ಣಂ ಸದಾ ವಂದೇ ಸರ್ವಸ್ವತಂತ್ರಮೀಶ್ವರಂ ।**

'ಯಾರ ಶಕ್ತಿಯಿಂದ ನಾವು ಮತ್ತು ಲೋಕಗಳು ಕೃತಕೃತ್ಯವೋ ಅಂಥ ಸರ್ವ, ಸ್ವತಂತ್ರ ಪ್ರಭುವಾದ ರಾಮಕೃಷ್ಣರಿಗೆ ಸದಾ ನಮಿಸುತ್ತೇನೆ.'

ದರ್ಶನಧಾರೆ: 'ಧಾರೆ' ದಾರಿಯೂ ಹೌದು, ದ್ವಾರವೂ ಹೌದು – ಮುಕ್ತಿಗೆ ಮತ್ತು ಭಗವದ್ದರ್ಶನಕ್ಕೆ !

ನರಮಹರ್ಷಿ ಸ್ವಾಮಿ ವಿವೇಕಾನಂದರು ದೇವದುರ್ಲಭ ನಾಣ್ಯವೊಂದನ್ನು ಟಂಕಿಸಿದರು : ಅದರ ಒಂದು ಮುಖ ''**ಆತ್ಮನೋ ಮೋಕ್ಷಾರ್ಥಂ**''(ಸ್ವಂತ ಮುಕ್ತಿಗಾಗಿ); ಮತ್ತೊಂದು ಮುಖ ''**ಜಗದ್ಧಿತಾಯ ಚ**''(ಲೋಕ ಕಲ್ಯಾಣಕ್ಕಾಗಿ).

ಪ್ರಪಂಚದ ದೀರ್ಘ ಧಾರ್ಮಿಕ ಮತ್ತು ಆಧ್ಯಾತ್ಮಿಕ ಇತಿಹಾಸದಲ್ಲಿ 'ದಿವ್ಯತ್ರಯ'ರು ಅನರ್ಘ್ಯ ಅನನ್ಯ ಚೇತನರು; ಅನ್ಯೋನ್ಯರು ಕೂಡ. ಅವರನ್ನು ಬೇರ್ಪಡಿಸುವುದೇ ಕಷ್ಟ; ಅಷ್ಟರ ಮಟ್ಟಿಗೆ ಆ ವಿರಾಟ್ ತ್ರಿಮೂರ್ತಿಗಳು ಒಬ್ಬರಲ್ಲೊಬ್ಬರು ಬೇರು ಬಿಟ್ಟಿದ್ದಾರೆ !

ಶ್ರೀರಾಮಕೃಷ್ಣರನ್ನು 'ಅವತಾರ ವರಿಷ್ಠ' ಎಂದು ಕರೆದಿದ್ದಾರೆ, ಸ್ವಾಮಿ ವಿವೇಕಾನಂದರು. ಅವರು 'ಅವತಾರ ವಿಶಿಷ್ಟ' ಸಹ; ಅಂತೆಯೇ ಸರ್ವೋದಯ ನಿಷ್ಠ ಎನ್ನಲೂಬಹುದು. (ಯುಗಧರ್ಮ ವಾಚಕವಾದ 'ಸರ್ವೋದಯ' ಎಂಬ ಮೇಲು ಮಾತು ಗಾಂಧೀಜಿಯದು; ಆದರೆ ಮೂಲಮಂತ್ರ ರಾಮಕೃಷ್ಣರದು!) ''ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ''ಯ ದ್ರಷ್ಟಾರ ವರ ಅವರು.

ಆ ಮಹತ್ ವ್ಯಕ್ತಿ, ವಿಭೂತಿ ತ್ರೇತಾಯುಗದಲ್ಲಿ ರಾಮನಾಗಿ, ದ್ವಾಪರಯುಗದಲ್ಲಿ ಕೃಷ್ಣನಾಗಿ ಕಾಣಿಸಿಕೊಂಡರು; ಕಲಿಯುಗದಲ್ಲಿ ಸಂಯುಕ್ತವಾಗಿ ರಾಮಕೃಷ್ಣರಾಗಿ ಅವತರಿಸಿದರು. ಆದರೆ ಮೊದಲನೆಯ ಸತ್ಯಯುಗದ ವಿಷಯವೇನು? ಅದೇ ವಿಶೇಷ: ''ಕಲಿಯುಗದಲ್ಲಿ ಸತ್ಯ(ವಚನ)ವೆ ತಪಸ್ಸು'' ಎಂದು ಹೇಳಿ, ಹಿಂದಕ್ಕೆ ಹೋಗುತ್ತಾರೆ, ರಾಮಕೃಷ್ಣರು! ಎಂದರೆ, ಅವರು ನಾಲ್ಕು ಯುಗಗಳಿಗೂ ಚೆನ್ನದ ಸೇತುವೆ ಕಟ್ಟಿದ 'ದಕ್ಷಿಣೇಶ್ವರ ದೇವಮಾನವ', ನವಕಲ್ಪದ ಶಿಲ್ಪಿ, ಕಲ್ಪತರು; ಯುಗಾನುಸಾರವಾಗಿ ಮೈವೆತ್ತ ಯುಗಾವತಾರ; ಅದ್ವೈತ ವೇದಾಂತ ಧುರಂಧರ; ''ದೇವಲಾಭವೆ ಬದುಕಿನ ಗುರಿ'' ಎಂದು ಉಚ್ಚ ಕಂಠದಿಂದ ಸಾರಿದ ಹೊಸಯುಗದ 'ಹರಿ'ಕಾರ!

ಶ್ರೀ ಶಾರದಾದೇವಿ ಹಿರಿಮೆ ಗರಿಮೆಗಳಲ್ಲಿ ರಾಮಕೃಷ್ಣ, ವಿವೇಕಾನಂದರಿಗೆ ಒಂದು ಮಿಗಿಲು! ಆ ಪುಣ್ಯಾತ್ಮೆ 'ಅವತಾರ ವರಿಷ್ಠೆ' ಎನ್ನಬಹುದು ; ಅವರು ಆದ್ಯಾಶಕ್ತಿಯ ಅವತಾರ,

ಜಗನ್ಮಾತೆಯ ಆವಿಷ್ಕಾರ. ಹೊರನೋಟಕ್ಕೆ ಸಾಮಾನ್ಯ ಸ್ತ್ರೀ ಅಥವಾ ಶ್ರೀಯಾಗಿ ತೋರಿದರೂ ಆಗಾಗ ಸ್ವಸ್ವರೂಪವನ್ನು ಮಿಂಚಿಸುತ್ತಿದ್ದರು! ''ಮುಕ್ತಿ? ಭಗವತ್ ಸಾಕ್ಷಾತ್ಕಾರ? ಅದು ನನ್ನ ಅಂಗೈ ನೆಲ್ಲಿ!'' ಎನ್ನುತ್ತಿದ್ದ ಶಾರದಾದೇವಿಯವರ ಬಗೆಗೆ ವಿವೇಕಾನಂದರು ಹೇಳುತ್ತಾರೆ: ''ರಾಮಕೃಷ್ಣರನ್ನು ನೀನು ದೇವರೆಂದಾದರೂ ಕರೆ, ಮನುಷ್ಯನೆಂದಾದರೂ ಕರೆ ಅಥವಾ ಇನ್ನೇನೆಂದಾದರೂ ಕರೆದುಕೊ; ಆದರೆ ಶಾರದಾದೇವಿಯವರನ್ನು ಯಾರು ಸಾಕ್ಷಾತ್ ಜಗನ್ಮಾತೆಯೆಂದು ಒಪ್ಪಿ ಗೌರವಿಸುವುದಿಲ್ಲವೋ ಅವನಿಗೆ ಧಿಕ್ಕಾರ!''

ರಾಮಕೃಷ್ಣರನ್ನು ಒಬ್ಬ 'ವಿಚಿತ್ರವ್ಯಕ್ತಿ' ಎಂದು ಕರೆಯುತ್ತಾರೆ, ವಿವೇಕಾನಂದರು. ಅವರ ಬದುಕೊಂದು ವೈಚಿತ್ರ್ಯಗಳ ಸರಮಾಲೆ; ಅವು ವೈಶಿಷ್ಟ್ಯಗಳು ಕೂಡ! ಪವಾಡ ದ್ವೇಷಿ ರಾಮಕೃಷ್ಣರು; ಆದರೆ ಅವರ ಜೀವಿತವೆ ಪಾವನ ಪವಾಡಗಳ ಪರಂಪರೆ! ವಿವೇಕಾನಂದರು ಹೇಳುತ್ತಾರೆ: ''ಪ್ರತಿಯೊಂದು ಧರ್ಮದಲ್ಲೂ ಒಬ್ಬನೇ ಭಗವಂತನನ್ನು ಕಾಣುವವನು, ಪ್ರತಿಯೊಂದು ಜೀವಿಯಲ್ಲೂ ಒಬ್ಬನೇ ಭಗವಂತನನ್ನು ಕಾಣುವವನು, ದಲಿತರಿಗಾಗಿ, ಈ ಜಗತ್ತಿನ ಪ್ರತಿಯೊಬ್ಬರಿಗಾಗಿ ಅಳುವ ಹೃದಯವಂತನು, ಭಾರತದಲ್ಲಿ ಮಾತ್ರವಲ್ಲ, ಹೊರಗೂ ಎಲ್ಲ ಹೋರಾಟ ನಿರತ ಧರ್ಮಗಳನ್ನು ಸಮನ್ವಯಗೊಳಿಸುವ ಮತ್ತು ಅದ್ಭುತ ಸಾಮರಸ್ಯವೊಂದನ್ನು, ವಿಶ್ವಧರ್ಮವನ್ನು ಅಸ್ತಿತ್ವಕ್ಕೆ ತರುವ ಉದಾತ್ತ ವಿಚಾರಗಳನ್ನು ಪರಿಕಲ್ಪಿಸಿಕೊಳ್ಳುವ ಭವ್ಯೋಜ್ವಲ ಬುದ್ಧಿಯವನು – ಆ ವ್ಯಕ್ತಿಯ ಜನನಕ್ಕೆ ಕಾಲ ಪಕ್ವವಾಗಿತ್ತು. ಅಂಥ ವ್ಯಕ್ತಿಯೊಬ್ಬ ಹುಟ್ಟಿದ; ಅವನೊಬ್ಬ ವಿಚಿತ್ರ (ವಿಸ್ಮಯಾವಹ) ವ್ಯಕ್ತಿ – ಈ ಶ್ರೀರಾಮಕೃಷ್ಣ!''

ಒಮ್ಮೆ ಯುವ ಶಿಷ್ಯನೊಬ್ಬ ರಾಮಕೃಷ್ಣರಿಗೆ ಅಂಜುತ್ತ ಅಳುಕುತ್ತ ಹೇಳಿದ: ''ನಾನು ಮದುವೆ ಮಾಡಿಕೊಂಡಿದ್ದೇನೆ''. ಅವರು ಅವನಿಗೆ 'ಛೀ' ಮಾರಿ ಹಾಕಿದರೆ? ಇಲ್ಲ, ದೃಢ ಸ್ವರದಿಂದ ಹೇಳಿದರು: ''ತಪ್ಪೇನು? ನಾನು ಮಾಡಿಕೊಂಡಿಲ್ಲವೆ?'' 'ವಿಚಿತ್ರ ವ್ಯಕ್ತಿ'ಯಲ್ಲದೆ ಅವರು ಮತ್ತೇನು?

ಶಾರದಾದೇವಿಯವರು ಹೇಳುವಂತೆ ರಾಮಕೃಷ್ಣರು ವೈರಾಗ್ಯ ನಿಧಿ. ಒಂದರ್ಥದಲ್ಲಿ, ಎಲ್ಲರೂ ಬಲ್ಲಂತೆ ದೇವರ ಹುಚ್ಚಿನ ಸಂನ್ಯಾಸಿ; ಆದರೆ ಇನ್ನೊಂದರ್ಥದಲ್ಲಿ ಸಂಸಾರಿ! ಸಂಸಾರವನ್ನು ಅವರು ನಿಕೃಷ್ಟವಾಗಿ ಕಾಣದ ಉತ್ಕೃಷ್ಟ ವ್ಯಕ್ತಿ. '' ಸಂಸಾರದಲ್ಲಿದ್ದುಕೊಂಡು ಸಾಧನೆ ಮಾಡುವುದು ಸುಲಭ, ಕೋಟೆಯೊಳಗಿದ್ದುಕೊಂಡು ಕಾದುವಂತೆ'' ಎಂದರು! ನೀರಿನೊಳಗೆ ದೋಣಿಯಿರಬಹುದು, ಆದರೆ ದೋಣಿಯೊಳಗೆ ನೀರಿರಬಾರದು, ಅಷ್ಟೆ. ರಾಮಕೃಷ್ಣರು ಎಲ್ಲೂ ಅತಿರೇಕಕ್ಕೆ ಹೋಗದ ಅತಿಮಾನವ; ಸಮರಸ ಪುರುಷ. (ಸಮಾಧಿಯ ಮಾತು ಬೇರೆ); ಗೃಹಸ್ಥರಿಗೂ ಗುರು! (ವರ್ಡ್ಸ್‌ವರ್ತ್‌ನ ಮಾತಿನಲ್ಲಿ) '' True to the kindred points of Heaven and Home.''

ಯಾವ ಗಳಿಗೆಯಲ್ಲಾದರೂ ನಿರ್ವಿಕಲ್ಪ ಸಮಾಧಿಗೇರಬಲ್ಲವರಾದರೂ ರಾಮಕೃಷ್ಣರು ಇಹದ ಉಪಾಧಿಯನ್ನು ಪೂರ್ತಿ ಕೊಡವಿಕೊಳ್ಳಲಿಲ್ಲ: ಅದೂ ಮೌಲಿಕ ಕೊಡುಗೆಯೇ!

ಈಗ ಅನೇಕ ಗಣ್ಯ ಚಿಂತಕರ ದೃಷ್ಟಿಯಲ್ಲಿ ಪರಮಹಂಸರನ್ನು ಪರಿಭಾವಿಸೋಣ –

ಗಾಂಧೀಜಿ: ''ರಾಮಕೃಷ್ಣರ ಜೀವನಕಥೆ ಅನುಷ್ಠಾನ ಧರ್ಮದ ಕಥೆ; ಭಗವಂತನನ್ನು ಮುಖಾಮುಖಿಯಾಗಿ ಕಾಣಲು ನೆರವಾಗುವಂಥದು!''

ಶ್ರೀ ಅರವಿಂದರು: 'ಸಂಕ್ಷಿಪ್ತ ಸಮಗ್ರತೆ'' (Epitome of the whole).

ಕ್ರಿಸ್ಟೋಫರ್ ಇಷರ್‌ವುಡ್: ವ್ಯಕ್ತಿಯಲ್ಲ, ''ವಿದ್ಯಮಾನ'' (Phenomenon) ಭೂಮಬಂಧುರ ಘಟನೆ.

ರೊಮೇ ರೋಲಾ: ''ಕಳೆದ ೨೦೦೦ ವರ್ಷಗಳಲ್ಲಿ ೩೩ ಕೋಟಿ ಹಿಂದೂಗಳ ಆಧ್ಯಾತ್ಮಿಕ ಅಭೀಪ್ಸೆಗಳ ಪೂರಣ!''

ಮ್ಯಾಕ್ಸ್‌ಮುಲ್ಲರ್: ''ನಿಜವಾದ ಮಹಾತ್ಮ, ಸ್ವೋಪಜ್ಞ ಆಲೋಚನೆಗಳ ವ್ಯಕ್ತಿ.''

ಅರ್ನಾಲ್ಡ್ ಟಾಯ್ನ್‌ಬಿ: ''ಪ್ರಾಯಶಃ ಭಾರತದಲ್ಲಾಗಲಿ ಬೇರೆಡೆಯಲ್ಲಾಗಲಿ ಮತ್ತಾವ ಧಾರ್ಮಿಕ ಪ್ರತಿಭೆಯೂ ಆ ಪ್ರಮಾಣವನ್ನು ಮುಟ್ಟಿರಲಿಲ್ಲ.''

ರಿಚರ್ಡ್ ಸ್ಟಿಫ್‌ಮನ್: ''ನವೀನ ಮನ್ವಂತರಕೊಬ್ಬ ಪ್ರವಾದಿ.'' (ಸ್ವಾಮೀಜಿಯಾದರೋ ಪ್ರೇಮದ ಪ್ರವಾದಿ: 'ಪ್ರೇಮ', 'ಪ್ರೇಮ' ಎಂಬುದೇ ಅವರ ಸತತ ಪಲ್ಲವಿಯಾಗಿತ್ತು.)

ಸ್ವಾಮಿ ಶಿವಾನಂದರು: ''ರಾಮಕೃಷ್ಣ ಎಂಬ ಹೆಸರೇ ಈ ಯುಗದ ಮಹಾಮಂತ್ರ.''

ರಾಮಕೃಷ್ಣರು ಅಪ್ರತಿಮ ಜ್ಞಾನಿ; ಆದರೆ ಅವರ ಜ್ಞಾನ ಪುಸ್ತಕ ಜ್ಞಾನವಲ್ಲ,(ಮಸ್ತಕಜ್ಞಾನ), ಶಾಸ್ತ್ರಜ್ಞಾನವಲ್ಲ; ಅಂತರ್ ಜ್ಞಾನ, ಪ್ರತಿಭಾನ; ಹೇಳಿದ್ದೆಲ್ಲ ಸ್ವಾನುಭವಜನ್ಯ !

ವಿಲಿಯಂ ಡಿಗ್ಬಿ ಹೇಳುತ್ತಾರೆ : ''೧೯ನೆಯ ಶತಮಾನದಲ್ಲಿ ಬ್ರಿಟಿಷ್ ಬೌದ್ಧಿಕ ಹಿರಿಮೆಯನ್ನು ಪ್ರಾಯೇಣ ರಾಬರ್ಟ್ ಬ್ರೌನಿಂಗ್ ಮತ್ತು ಜಾನ್ ರಸ್ಕಿನ್‌ರಲ್ಲಿ ಕಾಣಬೇಕು. ಆದರೆ ಬಂಗಾಳದ ಅನಕ್ಷರಸ್ಥ, ಅನಾಗರಿಕ ರಾಮಕೃಷ್ಣರೊಡನೆ ಹೋಲಿಸಿದಾಗ, ಅವರು ಕತ್ತಲಲ್ಲಿ ತಡಕಾಡುವವರಷ್ಟೆ!''

ರಾಮಕೃಷ್ಣರಿಗೆ 'ಸರ್ವಧರ್ಮ ಸಮನ್ವಯಾಚಾರ್ಯ' ಎಂಬುದು ಪ್ರಸಿದ್ಧ ಅಭಿಧಾನ; ಲೋಕಾಶ್ಚರ್ಯ! ಅವರ ಜ್ವಲಂತ ಜೀವನವೊಂದು ದೈವೀ ಪ್ರಯೋಗಶಾಲೆ; ಅವರೊಬ್ಬ ಅಸದೃಶ ಅಧ್ಯಾತ್ಮ-ವಿಜ್ಞಾನಿ! ಅಲ್ಲಿ ಅವರಿಗೆ ಸಿದ್ಧಿಸಿದ್ದು ಒಂದು ಕಡೆ

ಭಗವತ್ ಸಾಕ್ಷಾತ್ಕಾರ; ಇನ್ನೊಂದು ಕಡೆ ಎಲ್ಲ ಮತ ಧರ್ಮಗಳ ಐಕ್ಯದ ಅರಿವು. ಪರಿಣಾಮ: ''ದೇವರನ್ನು ಕಂಡಿದ್ದೀರಾ?'' ಎಂಬ ವಿವೇಕ ಪ್ರಶ್ನೆಗೆ ಅವರ ಉತ್ತರ ಲೋಕೋತ್ತರ ಮತ್ತು ಅಪೂರ್ವ: ''ಕಂಡಿದ್ದೇನೆ; ನಿನ್ನನ್ನು ಕಾಣುತ್ತಿರುವಷ್ಟೆ ವಾಸ್ತವವಾಗಿ ಕಂಡಿದ್ದೇನೆ!''

ಇದು ಅತ್ಯಮೂಲ್ಯ, ಸಾರಸಂಪನ್ನ, ರಾಮಕೃಷ್ಣ ವಚನ: ''ಸತ್ಯವೊಂದೇ; ಅದಕ್ಕೆ ಭಿನ್ನ ಭಿನ್ನ ಮಾರ್ಗಗಳು. ಯಾವನು ಕೃಷ್ಣನೋ ಅವನೇ ಶಿವ; ಅವನೇ ಕಾಳಿ; ಆದಿಶಕ್ತಿ; ಅವನೇ ಯೇಸು; ಅವನೇ ಅಲ್ಲಾ; ಒಬ್ಬ ರಾಮನಿಗೆ ನೂರು ನಾಮಗಳು! ಎಲ್ಲ ಮತಗಳೂ ದೇವರೆಡೆಗೆ ಕರೆದೊಯ್ಯುತ್ತವೆ'', '' ಯತೋ ಮತ್, ತತೋ ಪಥ್'' (ಎಷ್ಟು ಮತಗಳೋ ಅಷ್ಟು ಪಥಗಳು!)

ರಾಮಕೃಷ್ಣರು ಭಗವಂತನನ್ನು ಮಾತೃರೂಪದಲ್ಲಿ ಸಾಕ್ಷಾತ್ಕರಿಸಿಕೊಂಡುದೊಂದು ಪ್ರೋಜ್ವಲ ಸೋಜಿಗ! ಇ.ಸಿ ಬ್ರೌನ್ ಹೇಳುತ್ತಾರೆ: ''ಜಗತ್ತಿನಾದ್ಯಂತ ಸ್ತ್ರೀಯರು ಬಿಡುಗಡೆಗಾಗಿ ಹೋರಾಡುತ್ತಿದ್ದ ಕಾಲದಲ್ಲಿ ಭಗವಂತನನ್ನು ಜಗನ್ಮಾತೆಯನ್ನಾಗಿ ಸಾಕ್ಷಾತ್ಕರಿಸಿಕೊಳ್ಳುವಲ್ಲಿ ದಿವ್ಯಾವತಾರವೊಂದು ಅತ್ಯುನ್ನತ ಸಿದ್ಧಿ ಪಡೆಯಿತು. ಎಂಥ ಅದ್ಭುತ ಸಂಗತಿ!'' ರಾಮಕೃಷ್ಣರನ್ನು 'ಮಹಾ ಮಹಿಳಾವಾದಿ' ಎಂದು ಕರೆಯುತ್ತಾರೆ, ಬ್ರೌನ್.

ತಮ್ಮ ತಪಃಫಲವನ್ನು ಶಾರದಾದೇವಿಯವರಿಗೆ ಧಾರೆಯೆರೆದು, ನಾರಿಯರ–ಅರ್ಥಾತ್ ಸ್ತ್ರೀ ಜಾತಿಯ–ಸ್ಥಾನಮಾನಗಳನ್ನು ಎತ್ತರಿಸಿ ಪವಿತ್ರೀಕರಿಸಿದರು, ರಾಮಕೃಷ್ಣರು; ಇನ್ನೊಂದು ಕಡೆ, ಸಾಂಪ್ರದಾಯಿಕ ಜಾತಿಯ ನಿರಸನ ಮಾಡಿದರು; ಎಲ್ಲಕ್ಕಿಂತ ಮುಖ್ಯವಾದ ವಿಚಾರವೆಂದರೆ, ಭಾರತೀಯ ಸಮಾಜದ ದಾರುಣ ಕಳಂಕವಾದ ಅಸ್ಪೃಶ್ಯತೆಯನ್ನು, ತಮ್ಮ ತಲೆಗೂದಲಿನಿಂದ ಒರೆಸಿ, ತೊಡೆ(ಳೆ)ದು ಹಾಕಲು ಪ್ರಯತ್ನಿಸಿದರು ಕೂಡ!

ದಿವ್ಯತ್ರಯರ ಬದುಕು ಮಾನವ ಸೇವೆಯ ಮಹಾಗಾಥೆ. ''ಮಾನವಸೇವೆಯೆ ಮಾಧವ ಪೂಜೆ''. ನೆನಪಿಡಬೇಕು: ಉಪಕಾರವಲ್ಲ ಸೇವೆ! (ರಾಮಕೃಷ್ಣರಿಗೆ 'ಉಪಕಾರ' ಶಬ್ದ ಅಸಹ್ಯವಾಗಿತ್ತು) ಅಧ್ಯಾತ್ಮವೆಂದರೆ ಅಮಾನುಷತೆಯಲ್ಲ ಎಂಬುದು ಅವರ ಗಟ್ಟಿನಿಲುವು. ಮಾನವೀಯ ಮಮತೆ, ಮರುಕ, ಸಹಾನುಭೂತಿ, ಕಳಕಳಿಗಳ ಕೊಳವಾಗಿತ್ತು, ದಿವ್ಯತ್ರಯರ ಹೃದಯ. ಪರಮಾರ್ಥ ವಿರುದ್ಧವಲ್ಲದ ಸಾಂದ್ರ ಸಾಮಾಜಿಕ ಪ್ರಜ್ಞೆ ಅವರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿತ್ತು; ಓತಪ್ರೋತವಾಗಿತ್ತು !

''ದೇವರನ್ನು ಕಾಣುವುದಿದ್ದರೆ ಮಾನವನಲ್ಲಿ ಕಾಣು!'' ಎನ್ನುತ್ತಾರೆ, ರಾಮಕೃಷ್ಣರು. ''ಶಿವಜ್ಞಾನೇ ಜೀವಸೇವಾ'' (ಶಿವನೆಂಬ ಭಾವದಿಂದ ಜೀವಿಯ ಸೇವೆ) ಎಂಬುದು ಅವರ ಮಹತ್ಪೂರ್ಣ ಸೂತ್ರ! ಹಾಗೂ ನೇತ್ರ !

ಅಂತೆಯೆ, ವಿವೇಕಾನಂದರೂ ಜಪಿಸುತ್ತಾರೆ: ''ಯತ್ರ ಜೀವ ತತ್ರ ಶಿವ!'' ಈ ವಿವೇಕೋಕ್ತಿ ಸರ್ವಶ್ರುತ: ''ಇತರರಿಗಾಗಿ ಯಾರು ಬದುಕುತ್ತಾರೋ, ಅವರದೇ ನಿಜವಾದ ಬದುಕು; ಇತರರು ಬದುಕಿಯೂ ಸತ್ತಂತೆ!'' ಮತ್ತೂ ಹೇಳುತ್ತಾರೆ, ಸ್ವಾಮೀಜಿ: ''ದೀನದಲಿತರ ನೋವಿಗೆ ಸ್ಪಂದಿಸುವವರೇ ಮಹಾತ್ಮರು; ಮಿಕ್ಕವರು ದುರಾತ್ಮರು!'' ಹೀಗೂ ಘೋಷಿಸುತ್ತಾರೆ: ''ನಾನೊಬ್ಬ ಸಮಾಜವಾದಿ.''

'ದರಿದ್ರನಾರಾಯಣ' ಎಂಬ ಹೊಚ್ಚ ಹೊಸ ದೇವತೆಯೊಂದನ್ನು ಕಂಡುಹಿಡಿದದ್ದು ವಿವೇಕಾನಂದರ ಅಸಾಧಾರಣ ಸಾಧನೆ. (ಮೊದಲೇ ಇದ್ದ ಕೋಟ್ಯಂತರ ದೇವತೆಗಳ ಜೊತೆಗಲ್ಲ, ಬದಲು!) ''ದರಿದ್ರ ದೇವೋ ಭವ'', ''ಮೂರ್ಖ ದೇವೋ ಭವ'', ''ಪಾಪಿ ದೇವೋ ಭವ'' (ದರಿದ್ರರು ನಿಮ್ಮ ದೇವರಾಗಲಿ, ಮೂರ್ಖರು ನಿಮ್ಮ ದೇವರಾಗಲಿ; ಪಾಪಿಗಳು ನಿಮ್ಮ ದೇವರಾಗಲಿ) ಎಂದು ಅವರು ಕರೆಕೊಟ್ಟರು. (ಈ ಪಟ್ಟಿಗೆ ರೋಗಿಗಳನ್ನೂ ಸೇರಿಸಬೇಕು). ''ಮೊದಲು ಆಹಾರ, ಆಮೇಲೆ ಅಧ್ಯಾತ್ಮ'' ಎಂಬುದು ಅವರ ಉಕ್ತಿಮುಕ್ತಕ. ''ಜನಸಾಮಾನ್ಯರನ್ನು ಕಡೆಗಣಿಸಿದ್ದೇ ರಾಷ್ಟ್ರದ ಒಂದು ಮಹಾಪಾಪ!'' ಎಂಬುದು ಅವರ ಕಟುನುಡಿ. ''ಕ್ರಿಮಿಯೊಂದು ಕಷ್ಟದಲ್ಲಿರುವವರೆಗೆ ಸ್ವಂತ ಸುಖ ಬೇಕಿಲ್ಲ'' ಎನ್ನುತ್ತಾರೆ. ಮೊದಲೇ ಹೇಳಿದ್ದರಷ್ಟೇ ರಾಮಕೃಷ್ಣರು: ''ಒಮ್ಮೆ ಒಬ್ಬ ಮನುಷ್ಯನಿಗೆ ನೆರವಾಗಲು ಇಪ್ಪತ್ತು ಸಾವಿರ ಶರೀರಗಳನ್ನು ಬೇಕಾದರೂ ತ್ಯಜಿಸುತ್ತೇನೆ!''

ವಿವೇಕಾನಂದರ ಪ್ರಶ್ನೆಯೊಂದು ಗಮನಾರ್ಹ: ''ನಾವು ಸಂನ್ಯಾಸಿಗಳು ಏನು ಮಾಡಿದ್ದೇವೆ?'' ಅಧ್ಯಾತ್ಮ ಲೋಲುಪತೆಯನ್ನೂ ಟೀಕಿಸಿದರು ಸ್ವಾಮೀಜಿ! ಸ್ವರ್ಗಸಂಪಾದನೆಯಲ್ಲ, ಸ್ವರ್ಗದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದೂ ಅವರ ಪ್ರಶ್ನೆಯಾಗಿತ್ತು !!

ಮತ್ತೆ ಶ್ರೀಮಾತೆ. ಅವರು ಭಾರತೀಯ ಸ್ತ್ರೀತ್ವದ ಅತ್ಯುಚ್ಚ ಆದರ್ಶ; ರಾಮಕೃಷ್ಣರ ಪ್ರಕಾರ. ಆ ಬಗೆಗೆ ಕಡೆಯ ಮಾತು. ಅವರಲ್ಲಿ ''ವಿವೇಕ, ಮಾಧುರ್ಯಗಳು (wisdom and sweetness) ಸಾಕಾರಗೊಂಡಿವೆ'' ಎನ್ನುತ್ತಾರೆ, ಸೋದರಿ ನಿವೇದಿತಾ. ಇದು ದಿವ್ಯದ್ವಯರಿಗೂ ಅನ್ವಯಿಸುವ ಉಕ್ತಿ; ಇದೇ ಸಂಸ್ಕೃತಿಯ ಲಕ್ಷಣ. (''ಮಾಧುರ್ಯ ಮತ್ತು ಬೆಳಕು'' ಎಂದು ಸಂಸ್ಕೃತಿಯನ್ನು ಲಕ್ಷಣೀಕರಿಸುತ್ತಾನೆ, ಮ್ಯಾಥ್ಯೂ ಅರ್ನಾಲ್ಡ್). ಮಾನವ ಬಾಳೂ ಸಂಸ್ಕೃತಿಮಯ, ವಿರಾಟ್ ವಿಸ್ಮಯ! (ಯಾರಲ್ಲೂ ದೋಷವನ್ನು ಹುಡುಕಬೇಡಿ, ನಿಮ್ಮಲ್ಲೇ ಕಂಡುಕೊಳ್ಳಿ. ಯಾರೂ ಪರಕೀಯರಲ್ಲ; ಎಲ್ಲ ನಮ್ಮವರೇ'' ಎಂಬುದು ಶಾರದಾದೇವಿಯವರ ಸರಳ–ಗಹನ ಸಂದೇಶಾಮೃತ; ಆದ್ಯಂತ!)

ರಾಮಕೃಷ್ಣರು ''ಅಮ್ಮಾ, ನನ್ನನ್ನು ಶುಷ್ಕ ಬೈರಾಗಿಯಾಗಿಸಬೇಡ!'' ಎಂದು ಕಾಳಿಯನ್ನು ಬೇಡಿಕೊಂಡು, ರಸಋಷಿಯಾಗುತ್ತಾರೆ; ಹಾಸ್ಯಪಟು ಕೂಡ. ವಿವೇಕಾನಂದರು ಉದ್ಗರಿಸುತ್ತಾರೆ: ''Above all I am a Poet!'' (ಎಲ್ಲಕ್ಕಿಂತ ಮಿಗಿಲಾಗಿ ನಾನೊಬ್ಬ ಕವಿ).

‘‘ಘನೀಕೃತ ಭಾರತ’ ಎಂದು ತಮ್ಮನ್ನು ತಾವು ಕರೆದುಕೊಂಡ, ‘‘ಆಧುನಿಕ ರಾಷ್ಟ್ರೀಯ ಚಳುವಳಿಯ ಆಧ್ಯಾತ್ಮಿಕ ಪಿತ’’ ಎಂದು ಸುಭಾಷ್‌ಚಂದ್ರರಿಂದ ಕರೆಯಿಸಿಕೊಂಡ, ‘ನವಯುಗಾಚಾರ್ಯ’ ಎಂದು ಕುವೆಂಪು ಹೆಸರಿಸಿದ ವಿವೇಕಾನಂದರ ಮನುಕುಲ–ಮನನೀಯ ಹೇಳಿಕೆಯಿದು: ‘‘ಶ್ರೀರಾಮಕೃಷ್ಣರು ಹುಟ್ಟಿದ ದಿನವೇ ನವೀನ ಭಾರತದ ಮತ್ತು ಸ್ವರ್ಣಯುಗದ ದಿನ ಮೊದಲಾಯಿತು!’’ (ಭಾರತದ ಮಾತ್ರವಲ್ಲ ಪ್ರಪಂಚದ ಎಂದರೂ ತಪ್ಪಲ್ಲ.) ಅವರಲ್ಲಿ ಪೂರ್ವಪಶ್ಚಿಮಗಳು ಸಂಧಿಸಿದ ಅಚ್ಚರಿಯಿದೆ!

ತಮ್ಮ ಚಿಕಾಗೋ ಮಹಾಭಾಷಣದ ಆದಿಯಲ್ಲಿ ವಿವೇಕಾನಂದರು ಮಾಡಿದ ಸಂಬೋಧನೆ (‘‘ಸೋದರರೆ, ಮತ್ತು ಸೋದರಿಯರೆ’’ ಎಂದಲ್ಲ ; ‘‘ಸೋದರಿಯರೆ ಮತ್ತು ಸೋದರರೆ’’ ಎಂದು). ಭುವನ ಭ್ರಾತೃತ್ವದ ನೂತನ ಶಕವನ್ನೇ ಉದ್ಘಾಟಿಸಿತಲ್ಲವೆ?

ರಾಮಕೃಷ್ಣರು ಮೂಲಮೂರ್ತಿ; ವಿವೇಕಾನಂದರು ಉತ್ಸವ ವಿಗ್ರಹ. ಅಂಥ ಗುರುಶಿಷ್ಯರು ವಿಶ್ವದಲ್ಲೇ ವಿರಳಾತಿವಿರಳ! ಗುರುವರ್ಯನನ್ನು ‘ಶೋಧನದೀಪ’ ಎನ್ನುತ್ತಾರೆ, ಶಿಷ್ಯೋತ್ತಮ. ಇಬ್ಬರೂ ರೂಢಿಗೆ ಜೋಡಿ ದೀವಿಗೆ; ರಾಷ್ಟ್ರಕುಂಡಲಿನಿಯನ್ನು ಮಾತ್ರವಲ್ಲ, ಜಗತ್ಕುಂಡಲಿಯನ್ನೆ ಎಚ್ಚರಿಸಿದ ಮಹಾನುಭಾವದ್ವಯರು! ಈ ಹೇಳಿಕೆ ಗಮನಾರ್ಹ: ‘‘Columbus discovered the soil of America and Vivekananda its Soul.’’ (*‘‘ಕೊಲಂಬಸ್ ಅಮೆರಿಕದ ನೆಲವನ್ನು ಕಂಡುಹಿಡಿದ; ಆದರೆ ಸ್ವಾಮಿ ವಿವೇಕಾನಂದರು ಅದರ ಆತ್ಮವನ್ನೇ ಕಂಡುಹಿಡಿದರು!’’*).

‘‘ಭಾರತವನ್ನು ಅರ್ಥಮಾಡಿಕೊಳ್ಳಬೇಕಿದ್ದರೆ, ವಿವೇಕಾನಂದರನ್ನು ಅಧ್ಯಯನ ಮಾಡಿ. ಅವರಲ್ಲಿ ಎಲ್ಲವೂ ಇತ್ಯಾತ್ಮಕ, ಯಾವುದೂ ನೇತ್ಯಾತ್ಮಕವಲ್ಲ’’ ಎಂಬುದು ರವೀಂದ್ರನಾಥ ಟಾಗೋರರ ಉಪಾದೇಯ ಉಕ್ತಿ ; ಅದು ರಾಮಕೃಷ್ಣರ ಅನುಭೂತಿ ಸರಣಿಗೂ ಅನ್ವಯಿಸುತ್ತದೆ, ಮತ್ತೂ ಯಥಾರ್ಥವಾಗಿ! ಸೀಮಾಪುರುಷರು ರಾಮಕೃಷ್ಣ, ವಿವೇಕರು.

ಸಮನ್ವಯಸಿದ್ಧರಾದ ರಾಮಕೃಷ್ಣರಲ್ಲಿ ಸಪ್ತ ಸಾಮರಸ್ಯಗನ್ನು ಗುರುತಿಸುತ್ತಾರೆ, ಸ್ವಾಮಿ ಘನಾನಂದರು: (೧) ಧರ್ಮಗಳ ನಡುವಣ ಸಾಮರಸ್ಯ (೨) ತತ್ತ್ವಶಾಸ್ತ್ರಗಳ ನಡುವಣ ಸಾಮರಸ್ಯ (೩) ಆಧ್ಯಾತ್ಮಿಕ ಶಿಸ್ತುಗಳ ವಿವಿಧ ಮಾರ್ಗಗಳ ನಡುವಣ ಸಾಮರಸ್ಯ (೪) ಜೀವಾತ್ಮ–ಪರಮಾತ್ಮರ ನಡುವಣ ಸಾಮರಸ್ಯ (೫) ಆಧ್ಯಾತ್ಮಿಕ ಶಿಸ್ತಿನ ವಿವಿಧ ಪ್ರಕಾರಗಳ ಗುರಿಗಳಾದ ವಿವಿಧ ಅಧಿಪ್ರಜ್ಞಾರೂಪಗಳ ನಡುವಣ ಸಾಮರಸ್ಯ (೬) ಒಂದೇ ಧರ್ಮದೊಳಗಿನ ಪಂಥ, ಪಂಗಡಗಳ ನಡುವಣ ಸಾಮರಸ್ಯ (೭) ನಾನಾ ವರ್ಣಾಶ್ರಮಗಳಿಗೆ ಸೇರಿದ ಜನರ ಕರ್ತವ್ಯಗಳ ನಡುವಣ ಸಾಮರಸ್ಯ .

ಕೊನೆಯದಾಗಿ, ಹರಳು ಮಾಡಿ ಹೇಳುವುದಾದರೆ, ಶ್ರೀರಾಮಕೃಷ್ಣರು ‘ಆಖ್ಯಾನ’ : ಸ್ವಾಮಿ ವಿವೇಕಾನಂದರು ವ್ಯಾಖ್ಯಾತ. ಶ್ರೀಶಾರದಾದೇವಿಯವರಾದರೋ ಮಾತೃತ್ವದ ಅನುಸಂಧಾನ : ‘‘ನಾನು ಎಲ್ಲರ ತಾಯಿ!’’

‘ರತ್ನತ್ರಯ’ರನ್ನು ಒಂದು ಅಮೋಘ ಘಟಕವನ್ನಾಗಿ, ಗೋಳವನ್ನಾಗಿ ಪರಿಗಣಿಸಿ, ರವೀಂದ್ರರೊಡನೆ ಅಭಿಪ್ರಣಾಮ ಸಲ್ಲಿಸೋಣ:

‘‘ಸಕಲ ಸಾಕ್ಷಾತ್ಕಾರದ ಮಾನಸ ಸರೋವರದಿಂದ
ಹರಿದು ಬರುವ ಬಹುಪೂಜೆಯ
ವಿವಿಧ ವಾಹಿನಿಗಳು ನಿನ್ನ ಧ್ಯಾನಸಮುದ್ರದಲ್ಲಿ ಸಂಲಗ್ನವಾಗಿವೆ.

‘‘ನಿನ್ನ ಜೀವನದ ಸಮನ್ವಯ ದೇವಮಂದಿರಗಳಲ್ಲಿ
ಅನಂತಾನಂದವು ಅಸಂಖ್ಯವಾಗಿ ರೂಪುಗೊಂಡಿದೆ.

‘‘ಇದೋ ದೂರದಿಂದಲೂ ಹತ್ತಿರದಿಂದಲೂ ಆ ಗುಡಿಗೆ
ಯಾತ್ರೆ ಬರುತ್ತಿರುವವರ ನಮಸ್ಕಾರಗಳೊಡನೆ
ನನ್ನ ನಮಸ್ಕಾರವನ್ನೂ ನಿವೇದಿಸುತ್ತೇನೆ.’’

✱


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India)***

| | | |
|---|---|---|
| 1. Place of Publication | : | **Mysore 570 020** |
| 2. Periodicity of Publication | : | **Monthly** |
| 3. Printer's Name | : | **Swami Muktidananda** |
| Nationality | : | **Indian** |
| Address | : | **Adhyaksha, Sri Ramakrishna Ashrama, Yadavagiri, Mysore 570 020** |
| 4. Publisher's Name | : | **Swami Muktidananda** |
| Nationality | : | **Indian** |
| Address | : | **Adhyaksha, Sri Ramakrishna Ashrama, Yadavagiri, Mysore 570 020** |
| 5. Editor's Name | : | **Swami Jnanayogananda** |
| Nationality | : | **Indian** |
| Address | : | **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than 1% of the capital | : | **Adhyaksha, Sri Ramakrishna Ashrama, Yadavagiri Mysore 570 020** |

**I, Swami Muktidananda, hereby declare that the particulars given above are true to the best of my knowledge and belief.**

*sd.*
***Swami Muktidananda***
01.03.2024 Signature of the publisher